# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.122-2019** **ಡಿ . ಡಬ್ಲ್ಯೂಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮರಿಗೌಡ<br>ಹರತಲೆ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 20-02-2025. |

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಜೇ.ಎಸ್ ವಕೀಲರಿಂದಃ**

3. ಈ ದಾವಾ ಸಲ್ಲಿಸುವ ಪೂರ್ವದಲ್ಲಿ ವಾದಿ ನಿಪಿ-7 ರಂತೆ ನಮಗೆ ನೋಟಿಸ್ ನೀಡಿದ್ದು, ಅದಕ್ಕೆ ನಾನು ನಿಪಿ-8 ರಂತೆ ಪ್ರತುೂತ್ತರವನ್ನು ನೀಡಿರುತ್ತೇನೆ ಎಂದರೆ ಸರಿ. ನನ್ನ ಪ್ರತ್ಯೂತ್ತರದ ತಿಳುವಳಿಕೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ಮರಗಳನ್ನು ಕಡಿಯುವುದು ಕೂನುನುಬಾಹಿರ ಎಂದು ನನ್ನ ಪ್ರತ್ಯೂತ್ತರದಲ್ಲಿ ತಿಳಿಸಿದ್ದು, ಹಾಗಾದರೆ ಯಾವ ಕಾನೂನು ಇದೆ ಎಂಬ ಪ್ರಶ್ನೆಗೆ ಸಾಕ್ಷಿ ಮರಗಳು ತಾಯಿ ಇದ್ದಂತೆ ಎಂದು ನುಡಿಯುತ್ತಾರೆ. ಮರಗಳನ್ನು ವರ್ಷ ವರ್ಷಕ್ಕೆ ಗೊಬ್ಬರಹಾಕಿ ಆರೈಕೆ ಮಾಡಿ ಚೆನ್ನಾಗಿ ನೋಡಿಕೊಳ್ಳುತ್ತೇವೆ ಎಂದರೆ ಸರಿ. ಸಾಕ್ಷಿಗೆ ನಿಪಿ-4 ಅನ್ನು ತೋರಿಸಿ ಸದರಿ ಪೋಟೋದಲ್ಲಿ ಮುಂಭಾಗದಲ್ಲಿ ಕಾಣುತ್ತಿರುವ ಮರವನ್ನು ನೋಡಿದರೆ ಅದನ್ನು ಸರಿಯಾದ ರೀತಿಯಲ್ಲಿ ಆರೈಕೆ ಮಾಡಿದ ರೀತಿಯಲ್ಲಿ ಕಾಣುತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-5 ರಲ್ಲಿ ಕಾಣುತ್ತಿರುವ

ದೊಡ್ಡ ತೆಂಗಿನ ಮರಗಳು ಜಮೀನಿ ಅಂಚಿನಲ್ಲಿ ಇರುತ್ತವೆ ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ಜಮೀನಿನ ಅಂಚಿನಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ನಿಪಿ–5 ರ ಪೋಟೋದಲ್ಲಿ ಕಾಣುತ್ತಿರುವ ಮರಗಳಿಗೂ ಸಹ ಯಾವುದೇ ರೀತಿ ಆರೈಕೆ ಮಾಡಿದಂತೆ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ–4 ರ ಬಲಭಾಗದಲ್ಲಿ ಕಾಣುತ್ತಿರುವ ಮರಗಳು ನನ್ನ ಜಮೀನಿನಲ್ಲಿ ಇರುವ ಮರಗಳು ಎಂದರೆ ಸರಿ. ಸದರಿ ಮರಗಳು ಸುಮಾರು 15 ವರ್ಷದ ಮರಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವು ಸುಮಾರು 40 ವರ್ಷಗಳ ಮರಗಳು ಆಗಿದ್ದು, ಅವು ನಮ್ಮ ತಂದೆ–ತಾಯಿ ಹಾಕಿರುತಾರೆ ಎಂದು ನುಡಿಯುತ್ತಾರೆ. ನಿಪಿ–4 ಮತ್ತು 5 ರಲ್ಲಿ ಎತ್ತವಾಗಿ ಕಾಣುತ್ತಿರುವ ಮರಗಳನ್ನು ನನ್ನ ತಂದೆ–ತಾಯಿಗಳು ಹಾಕಿರುತ್ತಾರೆ. ಅವುಗಳನ್ನು ಸಹ ಹಾಕಿ ಸುಮಾರು 40 ವರ್ಷಗಳಾಗಿರುತ್ತವೆ. ನನ್ನ ವ್ಯವಸಾಯ ಗಾರನಾಗಿರುವುದರಿಂದ ತೆಂಗಿನ ಮರಗಳನ್ನು ನೋಡಿದ ತಕ್ಷಣವೇ ಅವು ಅಂದಾಜು ಎಷ್ಟು ವಯಸ್ಸಿನವು ಎಂಬುದು ಗೊತ್ತಾಗುತ್ತದೆ ಆದರೂ ಸಹ ಈ ದಾವೆಗಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಿಪಿ–4 ರ ಎಡಭಾಗದಲ್ಲಿ ಕಾಣುತ್ತಿರುವ ಒಂದು ಸಾಲು ತೆಂಗಿನ ಮರಗಳನ್ನು ವಾದಿಯವರು ಸುಮಾರು 15 ವರ್ಷಗಳ ಹಿಂದೆ ಹಾಕಿರುತ್ತಾರೆ. ಸದರಿ ಮರಗಳನ್ನು ಹಾಕುವ ಪೂರ್ವದಲ್ಲಿ ವಾದಿಯವರ ಜಮೀನಿನಲ್ಲಿಯೂ ಸಹ ಒಂದು ಸಾಲು ದೊಡ್ಡಾದ ಮರಗಳು ಇದ್ದವು ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು

ವಾದಿಯವರ ತಂದೆ ನಡುವೆ ವಿಭಾಗವಾದ ಸಮಯ ವಾದಿಯವರ ಜಮೀನಿನಲ್ಲಿ ಯಾವುದೇ ಮರಗಳು ಇರಲಿಲ್ಲ. ವಾದಿ ತಮ್ಮ ಜಮೀನಿನಲ್ಲಿ ಇದ್ದ ಮರಗಳನ್ನು ತೆಗೆಸಿದ್ದು ನಾವು ಸಹ ನಮ್ಮ ಜಮೀನಿನಲ್ಲಿ ಇರುವ ಮರಗಳನ್ನು ತೆಗೆಸುತ್ತೇವೆ ಎಂದು ಹೇಳಿ ನಂತರ ತೆಗೆಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ವಾದಿಯವರು ತನ್ನ ಮರಗಳನ್ನು 2015 ರಲ್ಲಿ ತೆಗೆಸಿರುತ್ತೇನೆ ಎಂದು ಹೇಳಿದ್ದು, ಆದರೆ ಆ ಸಂಬಂಧ ನನ್ನ ಪ್ರತ್ಯುತ್ತರದಲ್ಲಿ ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

5. ಸಾಮಾನ್ಯವಾಗಿ ತೆಂಗಿನ ಮರಗಳನ್ನು ಕಡಿದು ಅದನ್ನು ಇಟ್ಟಿಗೆಯನ್ನು ಬೇಯಿಸಲು ಉಪಯೋಗಿರುತ್ತಾರೆ ಎಂದರೆ ಸರಿ. ನಮ್ಮ ಗ್ರಾಮದಲ್ಲಿಯೂ ಸಹ ಸುಮಾರು ಮರಗಳನ್ನು ಇಟ್ಟಿಗೆ ಬೇಯಿಸಲು ಉಪಯೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಯಾವಾಗಲೂ ಇಟ್ಟಿಗೆ ತಯಾರು ಮಾಡಿಸಿರುವುದಿಲ್ಲ. ನಾನು ಹೇಳುವಂತೆ ತೆಂಗಿನ ಮರಗಳನ್ನು ಕಡಿಯಲು ಸರ್ಕಾರದ ಪೂರ್ವಾನುಮತಿ ಪಡೆಯುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಇರುವ ತೆಂಗಿನ ಮರಗಳು ಬೇರು ಬಿಟ್ಟುಕೊಂಡು ಯಾವುದೇ ತೆಂಗಿನ ಫಲವನ್ನು ನೀಡದೇ ಇದ್ದರೂ ಸಹ ವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಸದರಿ ಮರಗಳನ್ನು ತೆಗೆಸುತ್ತಿಲ್ಲ ಎಂದರೆ ಸರಿಯಲ್ಲ.

6. ನನ್ನ ತೆಂಗಿನ ಮರಗಳ ಗರಿಗಳು ವಾದಿಯವರ ಜಮೀನಿಗೆ ಬೀಳುವುದರಿಂದ ಅವರ ಭತ್ತದ ಫಸಲು ಮತ್ತು ಇತರೇ ಫಸಲುಗಳು

ಹಾಳಾಗುತ್ತಿರುತ್ತವೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಹಾಕಿರುವ ಬೇರೆ ತೆಂಗಿನ ಮರಗಳು ಬೆಳೆದುಕೊಳ್ಳಲಿ ಎಂಬ ಉದ್ದೇಶದಿಂದ ಹಳೇ ತೆಂಗಿನ ಮರಗಳನ್ನು ತೆಗಿಸುವಂತೆ ವಾದಿ ಕೇಳಿಕೊಂಡರೂ ಸಹ ದಾಯಾದಿ ಮತ್ಸರದಿಂದ ನಾನು ಮರಗಳನ್ನು ತೆಗಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**